ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	440
ಸದಸ್ಯರ ಹೆಸರು	:	ಶ್ರೀ ಬಸವರಾಜ ಪಾಟೀಲ್ ಇಟಗಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು)
ಉತ್ತರಿಸುವ ದಿನಾಂಕ	:	23.09.2020.
ಉತ್ತರಿಸುವ ಸಚಿವರು	:	ಲೋಕೋಪಯೋಗಿ ಸಚಿವರು

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
ಅ)	ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ದೇವದುರ್ಗದಿಂದ ಗೂಗಲ್ ಮತ್ತು ಗೂಗಲ್‌ನಿಂದ ಸಂಕೇಶ್ವರಾಳ ರಸ್ತೆ ಕಾಮಗಾರಿ ಕಳೆದ 3-4 ವರ್ಷಗಳಿಂದ ಸ್ಥಗಿತಗೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು, ಬಂದಿರುತ್ತದೆ.
ಆ)	ಬಂದಿದ್ದಲ್ಲಿ, ಸರ್ಕಾರ ಕೈಗೊಂಡ ಕ್ರಮವೇನು ಮತ್ತು ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?	ಸರ್ಕಾರದ ಆದೇಶ ಸಂ: ಲೋಇ 207 ಸಿಐಎಸ್ 2018, ಬೆಂಗಳೂರು, ದಿನಾಂಕ:02-11-2019 ರನ್ವಯ ಈ ಕೆಳಕಂಡ ಕಾಮಗಾರಿಗಳಿಗೆ ರೂ.110.20 ಕೋಟಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ಸರ್ಕಾರ ನೀಡಿರುತ್ತದೆ. (1) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗುಗಲ್ ವಾಯಾ ಅರಕೇರಾ, ಸುಂಕೇಶ್ವರಹಾಳ, (ಜಿ.ಮು.ರ) ರಸ್ತೆ ಕಿ.ಮೀ 0.00 ರಿಂದ 71.15 (ಆಯ್ದು ಭಾಗಗಳಲ್ಲಿ) ವರೆಗೆ ರಸ್ತೆ ಮರು ಸುಧಾರಣೆ ಮಾಡುವುದು ಅಂದಾಜು ಮೊತ್ತ ರೂ 62.10 ಕೋಟಿಗಳು (2) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ದೇವದುರ್ಗ ದಿಂದ ಗೂಗಲ್ ವಾಯಾ ಕೊಪ್ಪರ (ಜಿ.ಮು.ರ) ರಸ್ತೆ ಕಿ.ಮೀ 0.00 ರಿಂದ 28.00 ವರೆಗೆ ರಸ್ತೆ ಮರು ಸುಧಾರಣೆ ಮಾಡುವುದು ಅಂದಾಜು ಮೊತ್ತ ರೂ 35.50 ಕೋಟಿಗಳು (3) ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಅರಕೇರಾ ಕ್ರಾಸ್ ದಿಂದ ವಾಯಾ ಗಲಗ್ ನಾರಬಂಡಾ, ರಸ್ತೆ ಕಿ.ಮೀ 0.00 ರಿಂದ 28.20 (ಆಯ್ದು ಭಾಗಗಳಲ್ಲಿ)ವರೆಗೆ ರಸ್ತೆ ಸುಧಾರಣೆ ಮಾಡುವುದು ಅಂದಾಜು ಮೊತ್ತ ರೂ 12.60 ಕೋಟಿಗಳು ಅಂದಾಜು ಪಟ್ಟಿಗಳನ್ನು ದಿನಾಂಕ:30.10.2019 ರಂದು ಜರುಗಿದ, 91ನೇ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಹಾಗೂ ಅಂದಾಜು ಪಟ್ಟಿ ಪರಿಶೀಲನಾ ಸಮಿತಿಯಲ್ಲಿ ಮಂಡಿಸಲಾಗಿ, ದಿನಾಂಕ:02.03.2020 ರಂದು ಸದರಿ ಸಮಿತಿಯು ಈ ಪ್ರಸ್ತಾವನೆಗೆ ಅನುಮೋದನೆ ನೀಡಿರುತ್ತದೆ.

ಕ್ರ ಸಂ.	ಪ್ರಶ್ನೆಗಳು	ಉತ್ತರಗಳು
		ಈ ಮೇಲ್ಕಂಡ ರಸ್ತೆಗಳ ಆರ್ಥಿಕ ಬಿಡ್ ಸರ್ಕಾರಕ್ಕೆ ಸಲ್ಲಿಕೆಯಾಗಿದ್ದು, ಆರ್ಥಿಕ ಇಲಾಖೆಯು ಪ್ರಸಕ್ತ ಆರ್ಥಿಕ ಪರಿಸ್ಥಿತಿಯಲ್ಲಿ ಕಾರ್ಯಗತ (grounded) ಗೊಂಡಿರುವ ಕಾಮಗಾರಿಗಳ ಅನುಷ್ಠಾನ ಮತ್ತು ಅವುಗಳ ಬಿಲ್ಲುಗಳ ಪಾವತಿಗೆ ಆದ್ಯತೆಯ ಮೇಲೆ ಕ್ರಮ ವಹಿಸಬೇಕಾಗಿರುವುದರಿಂದ ಸದರಿ ಕಾಮಗಾರಿ ಕುರಿತಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ತಿಳಿಸಿರುತ್ತದೆ.

ಕಡತ ಸಂಖ್ಯೆ: ಲೋಇ 154 ಸಿಐಎಸ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪ ಮುಖ್ಯಮಂತ್ರಿ,
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ